# ಗ್ರೆಗೊರ್ ಮೆಂಡೆಲನ ಮಹಾಮನೆಯಲ್ಲಿ...

**ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಕನ್ನಡಿಗ ಸಿಡ್ನಿ ಶ್ರೀನಿವಾಸ್ ವಿಶ್ವದ ಮಹಾನ್ ವಿಜ್ಞಾನಿಗಳ ಮನೆಗಳಿಗೆ ಭೇಟಿ ಕೊಟ್ಟ ಅನುಭವವನ್ನು ಹಂಚಿಕೊಳ್ಳುವ ವಿಶಿಷ್ಟ ಮಾಲಿಕೆ 'ವಿಜ್ಞಾನಿಗಳ ಮಹಾಸನ್ನಿಧಿಯಲ್ಲಿ'. ಈ ಮಾಲಿಕೆಯ ಮೊದಲ ಬರಹ, ಜರ್ಮನ್–ಜೆಕ್ ಜೀವಶಾಸ್ತ್ರಜ್ಞ ಗ್ರೆಗೊರ್ ಮೆಂಡೆಲ್ (1822–1884) ಕುರಿತಾದುದು. ಕಳೆದ ವರ್ಷವಷ್ಟೇ ಮೆಂಡೆಲನ ಜನ್ಮ ದ್ವಿಶತಮಾನೋತ್ಸವದ ಆಚರಣೆ ನಡೆದಿದೆ. ಆ ಸಂಭ್ರಮದ ಆಸುಪಾಸಿನಲ್ಲಿ ಮೆಂಡೆಲ್ ಕಾರ್ಯ ನಿರ್ವಹಿಸಿದ್ದ ಸ್ಥಳಕ್ಕೆ ಲೇಖಕರು ಭೇಟಿಕೊಟ್ಟಿದ್ದ ನೆನಪುಗಳು ಇಲ್ಲಿವೆ.**



ಮ್ಯೂಸಿಯಂ ಮುಂದಿರುವ ಮೆಂಡೆಲ್‌ನ ಬೃಹತ್ ಪ್ರತಿಮೆಯ ಸನ್ನಿಧಿಯಲ್ಲಿ ಪತ್ನಿಯೊಂದಿಗೆ ಲೇಖಕರು

'ಇದೋ ನೋಡಿ ಮೆಂಡೆಲನ ಕೊಠಡಿ. ಅಲ್ಲಿ ಕಾಣುವುದು ಅವನು ಮಲಗುತ್ತಿದ್ದ ಮಂಚ. ಅವನು ನಿತ್ಯ ಪ್ರಾರ್ಥನೆ ಮಾಡುತ್ತಿದ್ದದ್ದು ಇಲ್ಲಿ. ಮೇಜಿನ ಮೇಲೆ ಅವನು ಉಪಯೋಗಿಸುತ್ತಿದ್ದ ಮೂರು ಸೂಕ್ಷ್ಮದರ್ಶಕಗಳಿವೆ. ಈ ಕಿಟಕಿಯ ಮೂಲಕ ನೋಡಿದರೆ ಕಾಣುವ ಪ್ರದೇಶದಲ್ಲಿಯೇ ಅವನು ತನ್ನ ಬಟಾಣಿ ಗಿಡಗಳನ್ನು ಬೆಳೆಸಿದ್ದ...'

ನಮ್ಮ ಗೈಡ್ ಅಲೆಸ್ ಜಪೋಟೋಕಿ ವರ್ಣಿಸುತ್ತಿದ್ದರೆ ನಾನು ದಿಗ್ಭ್ರಾಂತನಾಗಿ ನಿಂತಿದ್ದೆ. ಮೂಕವಿಸ್ಮಿತನಾದೆ. ಒಂದು ಬಗೆಯ ಕೃತಜ್ಞತಾಭಾವ ಬೆರೆತ ಪುಲಕ ನನ್ನನ್ನು ಆವರಿಸಿತ್ತು.

ಜೀವವಿಜ್ಞಾನದಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆದಿದ್ದ ಕೋಣೆಯದು! ಆ ಕೋಣೆಯಲ್ಲಿಯೇ ಮೆಂಡೆಲ್ ಮಹಾಶಯ ತಳಿವಿಜ್ಞಾನದ ನಿಯಮಗಳನ್ನು ರೂಪಿಸಿದ್ದು! (ವಿವರಗಳಿಗೆ ಜುಲೈ 14, 2022ರ 'ಸುಧಾ'ದಲ್ಲಿ ಪ್ರಕಟಗೊಂಡ ನನ್ನ ಬರಹ ಗಮನಿಸಬಹುದು.) ಆ ಕೊಠಡಿ ನಡುವೆ ನಿಂತಿರುವ ನಾನು ಧನ್ಯ ಅನ್ನಿಸಿತು. ಅದೊಂದು ಮಹಾಸನ್ನಿಧಿಯಲ್ಲದೆ ಮತ್ತೇನು?

2022ರ ಮೇ ತಿಂಗಳಿನಲ್ಲಿ ಆಸ್ಟ್ರೇಲಿಯಾದ ABC ರೇಡಿಯೊ ತನ್ನ ವಿಜ್ಞಾನ ಪ್ರಸಾರದಲ್ಲಿ 'ತಳಿ ವಿಜ್ಞಾನದ ಪಿತಾಮಹ' ಗ್ರೆಗೊರ್ ಮೆಂಡೆಲನ ಬಗ್ಗೆ ಅರ್ಧ ಗಂಟೆಯ ಕಾರ್ಯಕ್ರಮವನ್ನು ಬಿತ್ತರ ಮಾಡಿತ್ತು. 2022 ಮೆಂಡೆಲ್‌ನ ದ್ವಿಶತಮಾನದ ವರ್ಷ. ಜುಲೈ 22 ಅವನು ಹುಟ್ಟಿದ ದಿವಸ. ಅಂದಿನಿಂದ ಅವನು ಕಾರ್ಯ ನಿರ್ವಹಿಸಿದ ಬ್ರೂನೋ (ಇದು ಜೆಕ್ ಗಣರಾಜ್ಯದಲ್ಲಿದೆ) ನಗರದಲ್ಲಿ ಮೂರು ದಿನಗಳ ಅಂತರರಾಷ್ಟ್ರೀಯ ಅಧಿವೇಶನ ಜರುಗಲಿದೆ ಎಂದು ರೇಡಿಯೊ ಪ್ರಕಟಣೆ